# ಅಂಶ - 14 ಪ್ರವಾಸ ಸಾಹಿತ್ಯ

ವಿಷಯಕ್ರಮ


14.0 ಉದ್ದೇಶ

14.1 ಪೀಠಿಕೆ

14.2 ಪಠ್ಯ

    14.2.1 ಕಠಿಣ ಶಬ್ದಾರ್ಥ

    14.2.2 ಕವಿ ಕೃತಿ ಪರಿಚಯ

ಅಭ್ಯಾಸ - 1

ಅಭ್ಯಾಸ - 2

14.3 ಸಾರಾಂಶ

ಅಭ್ಯಾಸಗಳಿಗೆ ಉತ್ತರಗಳು


## 14.0 ಉದ್ದೇಶ

- ಈ ಅಂಶದಿಂದ ಪ್ರವಾಸ ಸಾಹಿತ್ಯವನ್ನು ಬರೆಯಬೇಕೆಂಬ ಕಲ್ಪನೆ ಬರುತ್ತದೆ.
- ಪ್ರವಾಸ ಲೇಖನದಲ್ಲಿ ವೈಯಕ್ತಿಕ ಅಂಶಗಳೂ, ಸಾರ್ವಜನಿಕ ಅಂಶಗಳೂ ಇರುತ್ತವೆಯೆಂಬುದನ್ನು ಅರಿಯುವಿರಿ.
- ಯಾವ ಸ್ಥಳಕ್ಕೆ ಬೆಟ್ಟಿಕೊಟ್ಟುದು ಪ್ರವಾಸ ಸಾಹಿತ್ಯವಾಗಬಲ್ಲದು. ಆದರೆ ಆ ಸ್ಥಳಕ್ಕೆ ಸಾರ್ವಜನಿಕ ಮಹತ್ವವಿದ್ದಾಗ ಎಂದು ಮನಗಾಣುವಿರಿ. ಪ್ರವಾಸ ವರ್ಣನೆ ಹೆಚ್ಚು ರೋಚಕವಾಗುತ್ತದೆ.
- ಐತಿಹಾಸಿಕ ಸ್ಥಳಗಳಿಗೆ ಇತ್ತ ಭೇಟಿ ಕನ್ನಡದ ಭವ್ಯ ಇತಿಹಾಸ ಪರಂಪರೆಯನ್ನು ಎತ್ತಿ ಹಿಡಿಯುತ್ತದೆ ಎಂದು ನೋಡುವಿರಿ.
- ಪ್ರವಾಸ ಸಾಹಿತ್ಯದ ಶೈಲಿ ಸುಲಭವಾಗಿದ್ದಷ್ಟು ರೋಚಕವಾಗಿರುತ್ತದೆ ಎಂಬುದನ್ನು ಮನಗಾಣುವಿರಿ.

## 14.1 ಪೀಠಿಕೆ

ಪ್ರವಾಸದ ಅನುಭವಗಳನ್ನು ಕಲಾತ್ಮಕವಾಗಿ ನಿರೂಪಿಸುವುದು ಪ್ರವಾಸ ಸಾಹಿತ್ಯದ ವೈಶಿಷ್ಟ್ಯ. ತಾವು ಕಂಡ ದೃಶ್ಯಗಳಲ್ಲಿ, ದರ್ಶನಗಳಲ್ಲಿ ಓದುಗರ ಮನಸ್ಸನ್ನು ಹಿಡಿಯಬಲ್ಲ ಘಟನೆ, ಸನ್ನಿವೇಶಗಳನ್ನು ಆಯ್ದುಕೊಳ್ಳುವಲ್ಲಿ ಪ್ರವಾಸ ಸಾಹಿತಿ ಜಾಣ್ಮೆಯನ್ನು ತೋರಿಸುತ್ತಾನೆ. ಅಥವಾ ತನ್ನ ಮನಸ್ಸನ್ನು ನಿಜವಾಗಿಯೂ ಸೂರೆಗೆಯ್ದ ಸನ್ನಿವೇಶಗಳು ಮಿಕ್ಕವರ ಮನಸ್ಸಿನ ಮೇಲೆ ಪರಿಣಾಮ ಬೀರುವುದೂ ಸತ್ಯ ಸಂಗತಿ. ಆದರೆ ತನ್ನ ಅನುಭವ, ಅನಿಸಿಕೆಗಳನ್ನು ಕಲಾತ್ಮಕವಾಗಿ ನಿರೂಪಿಸುವಲ್ಲಿ ಪ್ರವಾಸ ಸಾಹಿತ್ಯದ ಹಿರಿಮೆಯಡಗಿದೆ.

ಹಂಪೆಯ ದೃಶ್ಯ ಎಂತಹ ಕಲ್ಲೆದೆಯನ್ನೂ ಕರಗಿಸಬಲ್ಲುದು. ಇಟಲಿಯ ಪಾಂಪೇಯಿ ಪ್ರಕೃತಿಯ ಭೀಕರ ಕೋಪಕ್ಕೆ ತುತ್ತಾಗಿ ಲಕ್ಷೋಪಲಕ್ಷ ಜನರ ಹೃದಯವನ್ನು ಇಂದಿಗೂ ಮಿಡಿಯುತ್ತಿದ್ದರೆ ಕರ್ನಾಟಕದ ಹಂಪೆ ಮಾನವನ ಮತೀಯ ದ್ವೇಷಕ್ಕೆ ಗುರಿಯಾಗಿ ನಭೂತೋ ನ ಭವಿಷ್ಯತಿ ಎಂಬಂತಿದ್ದ ನಗರ ಮಣ್ಣುಪಾಲಾಗಿ ಜನತೆಯ ಕಂಬನಿಯ ಧಾರೆ ಸುರಿಯುತ್ತದೆ. ವಿಜಯನಗರ ಸಾಮ್ರಾಜ್ಯ ಕೇವಲ ಕರ್ನಾಟಕಕ್ಕಷ್ಟೇ ಅಲ್ಲ ಇಡೀ ಭರತಖಂಡದ ಅಭಿಮಾನಧನವಾಗಿದ್ದಿತು. Forgotten Empire ಮತ್ತು 'Never to be Forgotten Empire' ಎಂಬೆರಡು ಗ್ರಂಥಗಳು ವಿಜಯನಗರದ ವೈಭವ, ವೈಶಾಲ್ಯಗಳನ್ನು ವಿಸ್ತರಿಸುತ್ತಿವೆ.

ಈ ಹಂಪೆಗೆ ವಿ.ಸೀತಾರಾಮಯ್ಯನವರೂ ಕೆಲವು ಹಿರಿಯ ಸಾಹಿತಿಗಳೂ ಸ್ನೇಹಿತರೂ ಯಾತ್ರೆಯನ್ನು ಕೈಕೊಂಡಿದ್ದರು. ಹಾಳು ಹಂಪೆಯನ್ನು ಕಂಡು ವಿಜಯನಗರದ ವೈಭವವನ್ನು ನೆನೆದು ಕಂಬನಿದುಂಬಿ, ವಿ.ಸೀತಾರಾಮಯ್ಯನವರು ''ಪಂಪಾಯಾತ್ರೆ'' ಎಂಬ ಚಿಕ್ಕ ಹೊತ್ತಿಗೆಯನ್ನು ಪ್ರಕಟಿಸಿದರು. ಅಂದಿನಿಂದ ಇಂದಿನವರೆಗೆ ಅದು ನಮ್ಮ ಪ್ರವಾಸ ಸಾಹಿತ್ಯದ ಮೇರು ಕೃತಿಯಾಗಿ ನಿಂತಿದೆ. ಸಾವಿರಾರು ಜನ ಸಹೃದಯರ ಹೃದಯಗಳನ್ನು ಮಿಡಿದಿದೆ. ಪ್ರಸ್ತುತ ಪಠ್ಯಭಾಗವನ್ನು ಈ 'ಪಂಪಾಯಾತ್ರೆ' ಗ್ರಂಥದಿಂದ ಆಯ್ದುಕೊಂಡಿದೆ.

## 14.2 ಪಠ್ಯ

**ಪಂಪಾಯಾತ್ರೆ**

ಚೆನ್ನಯ್ಯ ನಮ್ಮ ಜೊತೆಯಲ್ಲಿ ಬರುವುದಕ್ಕೆ ಒಪ್ಪಿ ಮುಂದೆ ನಡೆದನು. ಅವನು ಮುಂದೆ, ನಾವು ಹಿಂದೆ. ಅವನು ಹಾಗೆಯೇ ನಮ್ಮ ಕಡೆಗೆ ತಿರುಗಿ ಅಲ್ಲಿಯ ಒಂದು ಪ್ರದೇಶವನ್ನು ಕೈಬೆರಳಿಂದ ನಿರ್ದೇಶಿಸಿ, ''ಅಲ್ಲಿ ನೀರು ಬಲು ಆಳ ಇದೆ ಸ್ವಾಮಿ. ಮೊನ್ನೆ ಇಬ್ಬರು ಮುಳುಗಿ ಹೋದರು'' ಎಂದನು.

''ಎಲ್ಲೊ''?

ಕೋದಂಡರಾಯಸ್ವಾಮಿ ದೇವಸ್ಥಾನದ ಎದುರಿನಲ್ಲಿ ನದಿಯ ಪಾತ್ರ ಬಹು ಅಗಲವಾಗಿದೆ. ನೀರಿನ ಪ್ರವಾಹ ಬಂದು ಬಂದು ಇಲ್ಲಿ ಸುಮಾರು ಒಂದು ಸಣ್ಣ ಕೆರೆಯಷ್ಟು ಅಂಗಳವನ್ನು ಮಾಡಿಕೊಂಡಿದೆ. ಎದುರಿಗಿರುವ ದೇವರು, ದೇವಸ್ಥಾನಗಳ ಸಮ್ಮುಖದಲ್ಲಿ ತುಂಗಭದ್ರೆ ನಮ್ರಳಾಗಿ ಪ್ರಣಾಮಗೆಯ್ಯಲೆಳಸಿ, ಪ್ರದಕ್ಷಿಣೆ ಮಾಡಿ ಮುಂದೆ ಹೋಗುವಂತಿದೆ. ಅಲ್ಲಿಗೆ ಕೈಬೆರಳು ತೋರಿಸಿ ಚೆನ್ನಯ್ಯ 'ಅಲ್ಲಿ ಎಂದನು. ನದಿಯ ಆಚೆ ಕಡೆಯ ದಂಡೆಯಲ್ಲಿ ಶ್ರೀ ರಾಮದೂತನು ಹುಟ್ಟಿದನೆಂಬ ಅಂಜನಾಪರ್ವತ ನಮಗೆ ಎಡಗಡೆ ಬೆಟ್ಟಗಳ ನಡುವೆ ಜಾಗ ಮಾಡಿಕೊಂಡು ಹರಿದು ಬರುತ್ತಿರುವ ನದಿ. ವಿಶಾಲವಾದ ನಮ್ಮ ಮುಂದಿನ ಜಲಾಂಗಣ: ತುಂಗಭದ್ರೆ ಅಲ್ಲಿಂದ ಮುಂದೆ ಅತಿ ಸಂಭ್ರಮದಿಂದ ಪಯಣ ಮಾಡುತ್ತ ಎದುರಿಗೆ ಸಿಕ್ಕಿದ ಕಲ್ಲು ಬಂಡೆಗಳನ್ನು ಅಪ್ಪಳಿಸಿಕೊಂಡು, ಸೀರ್ಪನಿಗಳನ್ನು ಚೆಲ್ಲಿಕೊಂಡು ಅವುಗಳ ಮೇಲೆ ಝಲ್ಲನೆ ಹರಿದು ಸುಳಿದು ಸಗರ್ವದಿಂದ ಹೋಗುತ್ತಿರುವ ದೃಶ್ಯ ಅವನ್ನು ನೋಡಿದರೆ ಯಾರ ಮನಸ್ಸಿನಲ್ಲಿ ತಾನೆ ಗಂಭೀರಭಾವ ತರಂಗಗಳು ಉದಯಿಸವು!

ಮುಂದೆ ಅನತಿ ದೂರದಲ್ಲಿಯೇ ಎತ್ತರವಾದ ತುಲಾಪುರುಷ ದಾನ ಸ್ತಂಭಗಳು. ವಿಜಯನಗರದ ಅರಸರು ಪರ್ವಗ್ರಹಣ ಇತ್ಯಾದಿ ಪುಣ್ಯಕಾಲಗಳಲ್ಲಿ ತುಲಾಭಾರ ಮಾಡಿಸಿಕೊಂಡು ರತ್ನಕನಕಾದಿ ದ್ರವ್ಯಗಳನ್ನು ಯಥೇಚ್ಛವಾಗಿ ದಾನ ಮಾಡುತ್ತಿದ್ದ ಸ್ಥಳವಂತೆ. ಸಾಮ್ರಾಜ್ಯೇಶ್ವರ ಕೃಷ್ಣದೇವರಾಯನೂ ಅವನ ತರುವಾಯ ಬಂದ ಅಚ್ಯುತರಾಯನೂ ಇಲ್ಲಿ ಈ ತೆರನಾದ ಸುವರ್ಣದಾನಗಳನ್ನು ಅನೇಕವಾಗಿ ಮಾಡಿದರಂತೆ. ಅದು ಶಾಂತಿ ಕರ್ಮವೋ, ಶಾಸ್ತ್ರವಿಧಿಯೋ, ತಮ್ಮ ವೈಭವ ದರ್ಪಗಳ ಉದ್ದಂಡ ಧೋರಣೆಯನ್ನು ಲೋಕಕ್ಕೆ ಪ್ರಕಟಿಸಿ ಖ್ಯಾತಿಗೊಳ್ಳಲು ಹಿಂದಿನವರು ನಡೆಸುತ್ತಿದ್ದ ದಂಭವೃತ್ತಿಯೋ ಇವೆಲ್ಲವೂನೋ ಹೇಳುವವರಾರು? ನಮ್ಮದು ಅತಿವೃಷ್ಟಿ ಅನಾವೃಷ್ಟಿಯ ಖಂಡ. ಇಲ್ಲಿ ಯಾವ ವಿಷಯದಲ್ಲಿಯೂ ಜನರಲ್ಲಿ ಸಮತೆಯಾಗಲಿ, ಸ್ತಿಮಿತ ಗತಿಯಾಗಲಿ, ಮಧ್ಯವೃತ್ತಿಯಾಗಲಿ ಇರದು. ಈ ಸ್ವಭಾವ ಉಷ್ಣ ದೇಶದವರಾದ ನಮಗೆ ಸೃಷ್ಟಿಕರ್ತಕೊಟ್ಟ ಅಖಂಡ ಶಾಪವೆಂದು ತೋರುವುದು.

ಅಲ್ಲಿ ಒಂದನ್ನೂ ಬಿಡದೆ ಎಲ್ಲವನ್ನೂ ಸಾವಕಾಶದಿಂದ ನೋಡಲು ನಮಗೆ ಕಾಲವಿಲ್ಲದಿದ್ದುದರಿಂದ ಶೀಘ್ರವಾಗಿ ನಡೆದೆವು. ಸ್ವಲ್ಪ ದೂರದಲ್ಲಿಯೇ ಒಂದು ದೊಡ್ಡ ದೇವಸ್ಥಾನ. ಅದೇ ವಿಠ್ಠಲ ಸ್ವಾಮಿಯ ಗುಡಿಯೆಂದು ತಿಳಿಯಿತು. ಎಲ್ಲರೂ 'ವಿಠ್ಠಲ ಸ್ವಾಮಿಯ ಗುಡಿ, ವಿಠ್ಠಲ ಸ್ವಾಮಿಯ ಗುಡಿ' ಎಂದು ಹೇಳುತ್ತಿದ್ದುದನ್ನು ಕೇಳಿದ್ದೆ. ಹೊರ ಪ್ರಾಕಾರವನ್ನು ನೋಡಿದವನು ''ಇಷ್ಟೆಯೇ? ಇಲಿಯನ್ನು ಹುಲಿಯೆಂದು ಕರೆದು ಹೋ ಎನ್ನುವುದೇ ನಮ್ಮ ಜನದ ಸ್ವಭಾವ. ಅಸ್ಥಿಭಾರವಿಲ್ಲದ ಅತ್ಯುಕ್ತಿ ನಮ್ಮ ರಾಷ್ಟ್ರಕ್ಕೇ ಬಂದುದು'' ಎಂದುಕೊಂಡೆ. ಆದರೆ ಒಳಗಡೆ ಹೋದ ಮೇಲೆ ನನ್ನ ಈ ಭಾವನೆ ತಪ್ಪೆಂದು ಮನಗಂಡೆನು. ನಾವು ಹೊರಟ ದಾರಿಯಿಂದ ಗುಡಿಗೆ ಪ್ರವೇಶ ತೆಂಕಣದ್ವಾರದಿಂದ.

ಚೆನ್ನಯ್ಯನು ಬಾಗಿಲಲ್ಲಿ ಜಗುಲಿಯ ಮೇಲೆ ಹುಳಿ ಮಾವಿನಕಾಯಿಗಳನ್ನು ತಿನ್ನುತ್ತ ಕುಳಿತುಕೊಂಡನು. ನಾವು ದೇವಸ್ಥಾನದ ಒಳಪ್ರಾಂಗಣವನ್ನು ಹೊಕ್ಕೊಡನೆಯೆ ಹೆಗಲ ಮೇಲಿದ್ದ ಜಮಖಾನವನ್ನು ಹಾಸಿ ಮಲಗಿದನು. ಅವನು ತಿಂದು ಉಳಿಸಿದುದನ್ನು ತಿನ್ನಲು ಒಂದು ತಂಡ ಕಪಿಗಳು ಬಂದು ಅವನ ಸುತ್ತಲೂ ಕಿಚುಗುಟ್ಟುತ್ತ ಗೊರ್ರೆನ್ನುತ್ತ ಹಲ್ಲು ಮಸೆಯುತ್ತ, ಕಾದಾಡುತ್ತ ಕುಳಿತವು. ಅವನೂ ಅವುಗಳಿಗೆ ಒಂದೊಂದು ಚೂರನ್ನು ಎಸೆಯುತ್ತ, ಅತಿ ಹತ್ತಿರ ಬಂದಾಗ ಕೈಯಿಂದಲೂ ಕೋಲಿಂದಲೂ ಆಗಾಗ ಬೆದರಿಸುತ್ತ, ಚದರಿಸುತ್ತ ಅವುಗಳೊಡನೆ ಆಟವಾಡುತ್ತ ಕುಳಿತನು. ಅವನಿಗೇನು? ಎಲ್ಲಿದ್ದರೆ ಅದೇ ಮನೆ. ಅವನ ಆಯುಧ ಆ ದೊಣ್ಣೆ. ಆ ಹರಕಿನ ಜಮಖಾನವೇ ಸರ್ವಸ್ವ ಆಸ್ತಿ. ಅವನ್ನು ಬಿಟ್ಟರೆ ಪ್ರಪಂಚದಲ್ಲಿ ತನ್ನದೆನ್ನುವ ಬೇರೊಂದು ವಸ್ತು ಇಲ್ಲ. ''ಪಾಪ! ತುಂಬ ಆಯಾಸ ಪಟ್ಟಿದ್ದಾನೆ. ಹಾಗೇ ಸ್ವಲ್ಪ ಹೊತ್ತು ಉರುಟಿ ಕೊಂಡಿರಲಿ'' ಎಂದರು ಯಜಮಾನರು. ನಮಗೂ ಹಾಗೆಯೇ ಅನ್ನಿಸಿತು.

ಈ ದೇವಸ್ಥಾನದಲ್ಲಿ ನೋಡಬೇಕಾದುವು ಮುಖ್ಯವಾಗಿ ಮೂರು: ಮುಖದ ಮರುಮಂಟಪ, ಪಕ್ಕದಲ್ಲಿನ ದೇವರ ಕಲ್ಯಾಣ ಮಂಟಪ, ಎದುರಿನಲ್ಲಿ ಸಣ್ಣ ಕಲ್ಲು ರಥ. ಪ್ರಾಕಾರದ ಒಳಗಡೆ ಅನೇಕ — ಶಿಲಾ ಶಾಸನಗಳಿವೆ. ಪ್ರಾಕ್ತನ ವಿಚಾರಕರು ಈ ಶಾಸನಗಳನ್ನು ಓದಿ, ಚಾರಿತ್ರಿಕ ವಿಷಯಗಳನ್ನು ವಿಮರ್ಶೆ ಮಾಡಿ ತಿಳಿದುಕೊಳ್ಳಬಹುದು.

ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿಕೊಂಡು ಮುಖಭಾಗಕ್ಕೆ ಬಂದು ನಿಂತರೆ ಅದೇನು ಚಿತ್ರಕೃತಿಯ ಸಂವಿಧಾನ: ಏನ ಶಿಲ್ಪಕಲಾಕೌಶಲ್ಯ; ದ್ರಾವಿಡ ಶೈಲಿಯ ವಾಸ್ತುರಚನೆಯಲ್ಲಿ ಈ ತೆರನಾದ ಇನ್ನೊಂದು ಶಿಲ್ಪಕೃತಿಯಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಮಹಾಮಂಟಪಕ್ಕೆ ಹತ್ತಿಹೋಗಲು ಮಾಡಿರುವ ಮೆಟ್ಟಲುಗಳ ಎರಡು ಕಡೆಗಳಲ್ಲೂ ಸುಂದರವಾಗಿ ಕೆತ್ತಿಮಾಡಿದ, ಸರ್ವಾಲಂಕಾರ ಭೂಷಿತವಾಗಿ ಮುಂಗಾಲುಗಳನ್ನೆತ್ತಿ ನಿಂತಿರುವ ಮದಗಜಗಳು ಹಂಪೆಯೊಳಗಿನ ಸರ್ವತ್ರ ಶಿಥಿಲ ಸ್ಥಿತಿ ಈ ಆನೆಗಳಿಗೂ ಬಂದಿದೆ. ಅವುಗಳ ಮುಖದಿಂದ ಸೊಂಡಿಲು ಕತ್ತರಿಸಿ ಹೋಗಿವೆ. ಮೇಲೆ ಹತ್ತಿ ಹೋಗಿ ನೋಡಿದರೆ ಸುತ್ತಲೂ ಸಾಲುಗಂಬಗಳು. ಎಲ್ಲವೂ ಒಂದೇ ಸಮನಾಗಿ ಸೌಂದರ್ಯೈಕ ದೃಷ್ಟಿಯಿಂದ ಮಾಡುದುವು. ಗರ್ಭಗುಡಿಯ ಬಾಗಿಲವರೆಗೆ ವಿಶಾಲವಾದ ಸ್ತಂಭ ಮಾರ್ಗ; ಅವುಗಳ ಆಚೆಯಲ್ಲಿ ಉಪಕಂಬ ಸಾಗುಗಳು; ಮಧ್ಯೆ ಉಪರಂಗ; ಪ್ರತಿಯೊಂದು ಕಂಬದಲ್ಲಿಯೂ ಶರಭ ಸಾಳ್ವಗಳ ಮೇಲೆ ಕುಳಿತ ಪಹರೆಯವನು. ಮೇಲ್ಗಡೆ ಪಟ್ಟಿಕೆಗಳಲ್ಲಿ ಸುತ್ತಲೂ ಚಿತ್ರಕೆಲಸ ರಾಮಾಯಣ ಮಹಾಭಾರತದೊಳಗಿನ ಘಟನಾವಳಿಗೆ ಸಂಬಂಧಪಟ್ಟವು. ನಾನು ಈವರೆಗೆ ನೋಡಿದ ಶಾಲೆಯೊಳಗಿನ ಯಾವ ಓಲಗದ ಪರದೆಯೂ ಇಷ್ಟು ಮನೋಹರವಾಗಿ, ಹೃದಯಾಪಹಾರಕವಾಗಿ ಇದ್ದುದನ್ನು ನೋಡಿರಲಿಲ್ಲ. ಅಲ್ಲಿಯೇ ಒಂದು ಕಡೆಗೆ ಇನ್ನೊಂದು ಕಡೆಯಿಂದ, ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋಗಿ ಆ ಸೊಬಗನ್ನೇ ಅನುಭವಿಸುತ್ತಿರಬೇಕೆಂದು ಆಶೆ. ಉಳಿದವರು ಕಲ್ಯಾಣ ಮಂಟಪದ ಕಡೆಗೆ ಹೊರಟರು. ''ಸಾಕಪ್ಪ ಬನ್ನಿ'' ಎಂದು ಕೂಗಿದರು. 'ಬಂದೆ' ಎಂದು ಹೇಳಿ ಕಣ್ಣು ತಪ್ಪಿಸಿಕೊಂಡು ಅವರಿಂದ ಮರೆಯಾಗಿ ಅಲ್ಲಿ ಇನ್ನೂ ಸ್ವಲ್ಪ ಹೊತ್ತು ಸುಳಿದಾಡಿದೆ.

ಇಲ್ಲಿ ಇಷ್ಟು ಶೃಂಗಾರವೇತಕ್ಕೆ? ಎಂದು ಒಂದು ಸಲ ಪ್ರಶ್ನೆ ಬಂತು. ದೇವರು ಇಷ್ಟು ಸೌಂದರ್ಯವನ್ನು ಒಂದೇ ಕಡೆ ರಾಶಿ ಹಾಕಿ ಮಿಕ್ಕ ಭಾಗಗಳಿಗೆ ಬಡತನವನ್ನೇಕೆ ಕೊಟ್ಟನೋ! ಅವನಿಗೂ ಹೀಗೆ ಪಕ್ಷಪಾತಬುದ್ಧಿ ಬಂದ ಮೇಲೆ ಸಾಮಾನ್ಯರು ನಿಷ್ಪಕ್ಷಪಾತಿಗಳಲ್ಲವೆಂದು ಅವರನ್ನು ಏಕೆ ಆಕ್ಷೇಪಿಸಬೇಕು? ಎಂದುಕೊಂಡೆ. ಇಷ್ಟು ಸುಂದರವಾದ ಕಟ್ಟಡಕ್ಕೆ ಈ ದುಸ್ಥಿತಿ ಏಕೆ ಬರಬೇಕು? ಏನು ವಿಧಿ ಲೇಖವೊ! ಎಂದು ಇನ್ನೊಂದು ಸಲ ತೋರಿತು. ಈ ಸೌಂದರ್ಯಕ್ಕೆ ಸಾಫಲ್ಯವೇ ಇಲ್ಲವೇನು? ಇಲ್ಲಿ ದೇವತಾ ವಿಗ್ರಹವಿಲ್ಲ. ಇಷ್ಟು ಸೊಗಸಾದ ಕಟ್ಟಡವು ತನ್ನಂಥವನಿಗೆ ತಕ್ಕುದಲ್ಲವೆಂದೂ, ಮೀರಿದುದೆಂದೂ, ಇಂಥ ಶೃಂಗಾರದ ನೆಲೆ ತನ್ನ ಯೋಗ್ಯತೆಗೆ ತಡೆಯದೆಂದೂ, ಮೀರಿದುದೆಂದೂ ಹೇಳಿ ವಿಠ್ಠಲ ಸ್ವಾಮಿಯು ಹಂಪೆಗೆ ಬಾರದೆ ಪಂಡರಪುರದ ತನ್ನ ಹಳೆಯ ಬಡ ಮಂದಿರದಲ್ಲಿ ನಿಂತು ಬಿಟ್ಟಿರುವಲ್ಲಿ ಈ ಸೌಂದರ್ಯಕ್ಕೆ ಪವಿತ್ರತೆ ಹೇಗೆ ಬರಬೇಕು? ದೇವರ ಸ್ಥಾನವಿಲ್ಲದ ದೇವಸ್ಥಾನ ಮಂಗಳಸ್ಥಾನವೆಂತಾದೀತು ಎಂದು ತೋರಿತು. ಉತ್ತರ ಕ್ಷಣದಲ್ಲಿಯೆ, ಛೇ! ಸೌಂದರ್ಯವೇ ಭಗವಂತನ ಪ್ರತಿರೂಪ; ಅದಕ್ಕೆ ಇತರ ಕಾರಣಗಳಿಂದ ಸಿದ್ಧಿ ಬರಬೇಕಾದ ಅವಶ್ಯಕತೆಯೇನಿದೆ? ಎಂದು ವಿಧ ವಿಧವಾಗಿ ಮನಸ್ಸು ಭ್ರಮಿಸ ತೊಡಗಿತು; ಅಥವಾ ತಮ್ಮ ಕುಶಲತೆಯ ವಿಷಯದಲ್ಲಿ ಅಹಂಕಾರ ಪಟ್ಟು, ಹೆಮ್ಮೆ ಬುದ್ಧಿಯಿಂದಿರುವ ಈ ವಿಜಯನಗರದ ಅರಸರ ಸಮೀಪದಲ್ಲಿ ನಾನೇಕೆ ವಾಸಮಾಡಬೇಕು? ಅವರ ಉಚ್ಛ್ರಾಯ ಉಪ್ಪರಿಗೆಗೆ ನಾನೇಕೆ ಸೋಪಾನ ಕಟ್ಟಿಕೊಡಬೇಕು? ಇದು ನನ್ನವರ ಸಾಮ್ರಾಜ್ಯ ನಿಜ. ಆದರೆ ನಮ್ಮವರೆಂದು ಮಲೆತವರನ್ನು ಶಿಕ್ಷಿಸದೆ ಬಿಡುವುದು ಯೋಗ್ಯವೆ? ಎಂದು ದೂರದಿಂದ ಅವರ ಕರ್ಮಗಳನ್ನು ಸುಮಾರು ಅರ್ಧ ಶತಮಾನದವರೆಗೆ ನೋಡಿ, ತಡೆಯಲಾಗದ ಕೋಪದಿಂದ ತಾನಾಗಿ ಕರುಣೆಯಿಂದಿತ್ತ ಆ ಸಾಮ್ರಾಜ್ಯವನ್ನು ನಾಶಮಾಡಿದನೇನೋ! ಎಂದೂ ಭಾವನೆ ಬಂದಿತು. ಭಾವನೆಗಳು ಹಾಗಿರಲಿ, ಆ ಸೌಂದರ್ಯವನ್ನು ನೋಡಿದರೆ — ಶಾಂತಂ ಪಾಪಂ –– ಅಮಂಗಳವನ್ನೇ ಕಳೆಗೊಂಡಿರಲಿಲ್ಲ. ಅತುಳ ಲಾವಣ್ಯಮಯಿಯಾಗಿ ಹಾವ ಭಾವ — ವಿಲಾಸಗಳಿಂದ ಲೋಕವನ್ನು ಬೆರಗುಮಾಡಿ ಸೋಲಿಸುವ ನಾರಿಯ ಅಥವಾ ಚಿರವೈಧವ್ಯ ಪರಿಣತವಾಗಿ ವ್ಯರ್ಥವಾದ ಸೌಂದರ್ಯದಂತೆ ತೋರತೊಡಗಿತು. ಇನ್ನು ಒಬ್ಬನೇ ಅಲ್ಲಿರಲು ಸಾಧ್ಯವಾಗದೆ ಹೋಯಿತು. ಆ ಪವಿತ್ರ ಭಾವನೆಗಳನ್ನು ದೂರ ಮಾಡಲು ಸಂಗಡಿಗರಿದ್ದಲ್ಲಿಗೆ ಹೋದೆನು.

ಅವರೆಲ್ಲರೂ ಕಲ್ಯಾಣ ಮಂಡಪವನ್ನು ಸೇರಿ ಅದನ್ನು ಪ್ರಶಂಸೆ ಮಾಡುತ್ತ ಮಂಟಪದ ಮಧ್ಯದಲ್ಲಿ ಕುಳಿತಿದ್ದರು. ಆ ಮಂಟಪವನ್ನು ನೋಡಿದೆ. ಮನಸ್ಸು ಪರವಶವಾದಂತಾಯಿತು. ಅದರ ಚೆಂದ ದೇವಸ್ಥಾನದ ಮಹಾಮಂಟಪದ ಮೋಹನತೆಯನ್ನು ಕೀಳುಮಾಡಿ ಲಜ್ಜೆಗೊಳಿಸುವಂತಹದು. ಅಲ್ಲಿಯೂ ಹೀಗೇ ಕಂಬ ಸಾಲುಗಳು, ವಿಶಾಲವಾದ ಮಧ್ಯರಂಗ, ಅಕ್ಕಪಕ್ಕಗಳಲ್ಲಿ ನಾಲ್ಕು ಕಡೆ ಉಪರಂಗಗಳು; ಒಂದೊಂದು ಒಂದೊಂದೇ ಕಲ್ಲಿನಿಂದ ಕಡೆದು ಕೆತ್ತಿ ಮಾಡಿದಂತಹವು. ನಿಲುಗಂಬದ ಅಡಿಯ ಭಾಗದಲ್ಲಿ ಒಳಮುಖವಾಗಿ ಸಿಂಹ ಜಾತಿಯ ಮೃಗಗಳು, ಮಧ್ಯದಲ್ಲಿ ಪೀಠದ ಮೇಲೆ ಹೊರ ಮುಖವಾಗಿ ನಾಲ್ಕೈದು ಶಿಲಾದಂಡಗಳು; ಒಳಭಾಗದಲ್ಲಿ ಶರಭಾ ರೂಢರಾದ ಸವಾರರು. ಮಂಟಪದ ನಾಲ್ಕೂ ಕಡೆಯೂ ಹೀಗೆಯೇ ವಿಧ ವಿಧವಾದ ನಯಗೆಲಸಗಳಿಂದ, ಶಿಲ್ಪಾಭರಣ ಚಮತ್ಕೃತಿಗಳಿಂದ ಕೆತ್ತಿ ಸಿಂಗರಿಸಲ್ಪಟ್ಟಿರುವ ಕಂಬ, ವೇದಿಕೆ, ಮೇಲ್ಗಡೆಯ ಮಾಳಿಗೆಯ ಮೂಲೆ ಪಾಟಿಗಳಲ್ಲಿ ಲೋವೆಕಲ್ಲಗಳ ಮೇಲೆ ಪಕ್ಷಿಯ ರೆಕ್ಕೆಗಳಂತೆ. ಶಿಲ್ಪ ಕೆಲಸ ಲೋವೆಯ ಕೆಳಗೆ ಲಾಂದರಗಳನ್ನು ತಗುಲಿ ಹಾಕುವುದಕ್ಕಾಗಿ ಮಾಡಿದ ಕಲ್ಲ ಉಂಗುರಗಳು. ಉತ್ತಮವಾದ ಸಹಜ ಸೌಂದರ್ಯವನ್ನು ವೃದ್ಧಿ ಮಾಡಲು ಅಂಗಾಂಗಗಳಿಗನುಗುಣವಾಗಿ ಉಡಿಗೆ ತೊಡಿಗೆಗಳನ್ನು ಹಾಕಿ ಅಲಂಕರಿಸುವಂತೆ ಮಂಟಪದ ಒಳಮಾಳಿಗೆಯ ಪ್ರತಿಭಾಗವೂ ಸ್ಫುಟವಾಗಿ ಕಂಡು ಶೋಭಿಸುವಂತೆ ಹಸುರು, ನೀಲಿ, ಗುಲಾಬಿ, ಕೆಂಪು ಮುಂತಾದ ಬಣ್ಣಗಳಿಂದ ಅವನ್ನು ಹೆಚ್ಚು ಉಜ್ವಲವಾಗಿ ಕಾಂತಿಯುತವಾಗಿ ಮಾಡಿದ್ದಾರೆ. ಭವ್ಯ ಗಾನವೊಂದು ಘನೀಭೂತವಾಗಿ, ಶಿಲಾಕೃತಿಯಾಗಿ ಪರಿಣಮಿಸಿದಂತೆ ಇಲ್ಲಿಯ ನೋಟ. ಆ ರಾಜರ ಕಲಾಭಿರುಚಿ, ಅಲಂಕಾರ ದೃಷ್ಟಿ, ರಸಿಕತೆ ಇವುಗಳನ್ನು ಏನೆಂದು ಹೇಳೋಣ!

ಆ ಚಿತ್ರಗಾರರು ಶಿಲ್ಪಿಗಳು ತಾನೇ ಎಂಥವರು! ಯಾವ ಚಕ್ರವರ್ತಿಯ ವಿವಾಹ ಮಂಟಪ ಈ ತೆರನಾದ ಶಿಲ್ಪ ಕೌಶಲವನ್ನು ತೋರಿಸಬಲ್ಲುದು? ಕಲ್ಯಾಣ ಮಂಟಪವೆಂದರೆ ಇದಕ್ಕಲ್ಲವೆ ಆ ಹೆಸರು ಸಲ್ಲತಕ್ಕದ್ದು ಎಂದುಕೊಂಡೆ. ಆ ಅವಸರ ವೈಭವವೂ ಮೈಯುಬ್ಬೂ ಎಂಥವಾಗಿದ್ದಿರಬೇಕು? ಪಂಪಾಪತಿಯ ದೇವಸ್ಥಾನದ ಮೇಲೆ ಬೆಳ್ಳಿ ಚಿನ್ನದ ತಗಡುಗಳಿಂದ ಹೊದಿಕೆಗಳನ್ನು ಮಾಡಿಸಿ ಅದನ್ನು ಕಾಪಾಡುತ್ತಿದ್ದರಂತಲ್ಲ! ತಾವು ಮಾಡಿದ ಪ್ರತಿಯೊಂದು ಕೆಲಸವೂ ಚಿರಯಶಸ್ವಿಯಾಗಿ, ಆಚಂದಾರ್ಕವಾಗಿ ನಿಲ್ಲಲೆಂದು ಜಗತ್ತನ್ನು ಅಚ್ಚರಿಗೊಳಿಸಲು ಮಾಡಿದಂತಹದು, ಎಷ್ಟು ಅಲ್ಪ ಅವಧಿಯಲ್ಲಿ ಎಷ್ಟು ಮಹತ್ಕಾರ್ಯ ಸಾಧನೆಗಳು! ಯಶೋಹೀನರಾಗಿ, ಅನಾಮಧೇಯರಾಗಿ ಒಂದು ಶತಮಾನಕಾಲ ಬದುಕಿ ಕ್ರಿಮಿಗಳಂತೆ ಜೀವಿಸಿದ್ದು ತಾವು ದೀರ್ಘಜೀವಿಗಳೆನ್ನಿಸಿಕೊಳ್ಳುವುದಕ್ಕಿಂತ ಪ್ರಚಂಡ ಸತ್ವಶಾಲಿಗಳಾಗಿ, ಕೀರ್ತಿಮಹಿಮಾನ್ವಿತರಾಗಿನಾಲ್ಕು ದಿನ ಬಾಳಿ ಹೋಗುವುದು ಘನತರವಾದುದಲ್ಲವೆ? ಎನ್ನಿಸಿತು. ಬರಿಯ ಆಯುಷ್ಯಕ್ಕೆ ಮಡ್ಡಿ ಜನರು ಏಕೆ ಆಶೆ ಪಡುವರೋ! ಆಯುಷ್ಯ ವಿಷಯದಲ್ಲಿ ನಮ್ಮಭಾವನೆ ಹೀಗಾದರೆ ನಮಗಿಂತಲೂ ಶತಾಧಿಕವಾಗಿ ಶತಸಹಸ್ರಾಧಿಕವಾಗಿ ಇರುವ ಆ ಕಲ್ಲುಬಂಡೆಗಳು ಶ್ರೇಷ್ಠವಾದುವಲ್ಲವೆ?

ಅದು ಹೋಗಲಿ ಯಾವ ಚಿತ್ರಗಾರನು ತನ್ನ ಚಿತ್ರಗಳನ್ನು ಇಷ್ಟು ಉಜ್ವಲವಾಗಿ, ಸುಂದರವಾಗಿ, ಸಜೀವವಾಗಿ ಚಿತ್ರಿಸಬಲ್ಲನೋ ನಾನರಿಯೆ. ಸಂಧ್ಯಾರುಣ ರಾಗಗಳಿಂದ ಬಣ್ಣಗೊಂಡು, ವಿಧ ವಿಧವಾಗಿ ಕಾಂತಿಪಡೆದು ಕ್ಷಣ ಕ್ಷಣಕ್ಕೂ ಹೊಸ ಶೃಂಗಾರಗಳನ್ನು ತೋರಿಸಿ ಮೋಹಿಸುವ ಮುಗಿಲಿನ ಶ್ರೇಣಿಗಳು ಒಂದೊಂದೂ ತಮ್ಮಷ್ಟಕ್ಕೆ ತಾವೇ ಕೂಡಿ ಬಂದು ಈ ರೀತಿಯಲ್ಲಿ ಆಕಾರ ತಾಳಿ, ಘನಿಷ್ಠವಾಗಿ ಇಲ್ಲಿ ಊರಿ ನಿಂತುಬಿಟ್ಟಿರುವಂತೆ ಈ ಮಂಟಪ ಶೋಭಿಸುವುದಲ್ಲ! ಒರಟಾದ, ಜಡವಾದ ಕಲ್ಲಿಗೆ ಹೀಗೆ ಜೀವಕಳೆ ತುಂಬುವವನು ಸೃಷ್ಟಿಕರ್ತನಿಗೆ ಸಮಾನನಲ್ಲವೇ! ಇಹದಲ್ಲಿ ಸೃಷ್ಟಿಕರ್ತನೆಂಬುವವನಾರಾದರೂ ಇರುವನಾದರೆ ಅವನು ಕಲಾ ನಿಪುಣನೆಂದೂ ಆ ಕೆಲಸವು ಕವಿ, ಚಿತ್ರಕ, ಶಿಲ್ಪಿ, ಗಾಯಕ ಇವರುಗಳಿಗಲ್ಲದೆ ಇತರರಿಗೆ ಸಾಧ್ಯವಾಗದೆಂದೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅವರು ಸರ್ವ ನಿಯಾಮಕರೆಂದೂ ಅವರು ಶ್ರೇಷ್ಠರಾದರೆ ನಿಜವಾಗಿಯೂ ಬ್ರಹ್ಮರೇ ಎಂದೂ ಎನ್ನಿಸಿತು.

ಯಜಮಾನರೂ ರಾಯರೂ ಗಡಿಯಾರ ತೆಗೆದು ನೋಡಿದರು. ನಾಲ್ಕೂ ಕಾಲು ಗಂಟೆಯಾಗಿತ್ತು. "ಹಿಂದಿರುಗಿ ಬರುವುದು ಬಹಳ ಹೊತ್ತಾಗಿ ಕತ್ತಲಾಗಿ ಹೋಗುತ್ತೆ; ನಡೆಯಿರಪ್ಪ, ಹೆಜ್ಜೆ ಹಾಕಿ" ಎಂದರು. ಚೆನ್ನಯ್ಯನೂ 'ಹೊರಡೋಣ ಸ್ವಾಮಿ' ಎಂದ. ಮೂರ್ತಿ ಸ್ವರೂಪದಲ್ಲಿ ಅಲ್ಲಿ ವಾಸಮಾಡಿಕೊಂಡಿರದಿದ್ದರೂ ಅಲ್ಲೇ ಎಲ್ಲೆಲ್ಲೂ ಅಡಗಿ ಆ ಕಲ್ಲು ಕಟ್ಟಡಕ್ಕೆ ಜೀವವನ್ನಿತ್ತಿರುವ ಆ ಸೌಂದರ್ಯ ಮೂರ್ತಿಯ ಅಪ್ಪಣೆ ಪಡೆದು ಮುಂದೆ ಹೊರಟೆವು.

ಇತರ ದೇವರಸ್ಥಾನಗಳ ಮುಂಭಾಗದಲ್ಲಿರುವಂತೆಯೇ ಇಲ್ಲಿಯೂ ತೇರುಬೀದಿ, ನಾಲ್ಕೂ ಕಡೆ ದೇವಸ್ಥಾನಗಳು. ಈಗ ಅವೆಲ್ಲ ಭೂಗತವಾಗಿವೆ. ಅಲ್ಲಿರುವ ದೇವತೆಗಳ ಕೈ ಒಂದು ಕಡೆ, ರುಂಡ ಮುಂಡಗಳು ಬೇರೆ ಬೇರೆ ಕಡೆ, ಕಣ್ಣೊಂದು ಕಡೆ, ಕಣ್ಣಿನ ಹೊಳಪೊಂದು ಕಡೆ; ಹೀಗೆ ತಮ್ಮ ಅವಯವ ಭಾಗಗಳನ್ನೂ ಕಳೆಗಳನ್ನೂ ಕಳೆದುಕೊಂಡು ವಿಗ್ರಹಗಳು ಭಿನ್ನವಾಗಿ ಎಲ್ಲೆಲ್ಲಿಯೂ ಬಿದ್ದಿವೆ. ಅವುಗಳ ಮೇಲ್ಗಡೆ ಪೊದೆಗಳು ಮುಳ್ಳುಗಿಡಗಳೂ ಕ್ರೂರವಾಗಿ ಹಬ್ಬಿವೆ. ಕ್ರೂರತರವಾದ ಮುಳ್ಳುಹಂದಿಗಳು ಯಥೇಷ್ಟವಾಗಿ ಅವುಗಳೊಳಗೆ ವಾಸ ಮಾಡಿಕೊಂಡಿರಬೇಕು. ಅವುಗಳ ಹಂದಿಮೂತಿಯೂ ಕಿಸುಗಣ್ಣೂ ಪರಕೆ ಮೈಯೂ ಭಯಂಕರವಾದ ತಮ್ಮ ರೂಪವನ್ನು ಆಗಿಂದಾಗ್ಗೆ ಹೊರ ದೋರಿಕೊಳ್ಳುತ್ತ ಆ ಸ್ಥಾನದಲ್ಲಿ ಶಾಶ್ವತವಾಗಿ ತಾವು ವಸತಿ ಕಲ್ಪಿಸಿಕೊಂಡಿರುವವೆಂದು ಸಾರುವಂತೆ ಕಾಣುವವು. 'ಈ ಪ್ರದೇಶವೆಲ್ಲ ಈಗ ನಮಗೆ ಸೇರಿದುದು; ಇಲ್ಲಿಗೆ ಬರುವ ಜನರು ನೀವು ಜೋಕೆಯಿಂದಿರಬೇಕು" — ಎಂದು ಹೇಳುವಂತೆ ತಮ್ಮ ಪ್ರಾಬಲ್ಯದ ಗಡಿಗಳನ್ನು ಸೂಚಿಸಲೋ ಎಂಬಂತೆ — ನಾಲ್ಕಾರು ಮಾರುಗಳ ದೂರ ಮೊನಚಾದ ತಮ್ಮ ಮುಳ್ಳರಿಗಳನ್ನು ಎಸೆದಿವೆ. ಕ್ರೂರತಮವಾಗಿ ಪಾಳುದೇವತೆ ಎಲ್ಲೆಲ್ಲಿಯೂ ವಿಕಟಹಾಸದಿಂದ ತನ್ನ ಪ್ರಭಾವವೆಂಥದೆಂಬುದನ್ನು ಬಿರನೆ ಬೀಸುವ ಉರಿ ಗಾಳಿಗೆ ಬೇರು ಹೇಳಿ ಆ ಪ್ರದೇಶವನ್ನು ಶ್ಮಶಾನವಾಗಿ ಮಾಡಿದೆ. ಶ್ಮಶಾನವಲ್ಲದೆ ಮತ್ತೇನು? ರಕ್ತ, ಮಾಂಸ, ರಸ, ರಾಗ, ಬಣ್ಣ ಕಾಂತಿಗಳಿಂದ ಪರಿಪುಷ್ಟರಾದ ಯುವಕ ಯುವತಿಯರು ನಗುನಗುತ್ತ ಸರಸವಾಡುತ್ತಿದ್ದ ಸುಖಭೂಮಿಯಲ್ಲಿ ಈಗ ವಿಷಧರ ಸರ್ಪಗಳು, ಮುಳ್ಳು ಹಂದಿಗಳು, ಕಳ್ಳಕಾಕರು. ಎಲ್ಲಿ ಹೂ ದೋಟಗಳ ಪರಿಮಳವನ್ನು ಹೊತ್ತುಕೊಂಡು ತಣ್ಣಗೆ ತಂಗಾಳಿ ಬೀಸುತ್ತಿತ್ತೋ ಅಲ್ಲೆ ಈಗ ದಾರುಣ ಉರಿಗಾಳಿ. ಪ್ರಪಂಚದ ಚಕ್ರಾಧಿಪತಿಗಳ ಸಂದಣಿಯಲ್ಲಿ ಎಲ್ಲ ಅಂಶಗಳಲ್ಲಿಯೂ ಸಮತೂಗಲು ಅರ್ಹರಾಗಿದ್ದ ಸಾಮ್ರಾಟರು ಆಳುತ್ತಿದ್ದ ಪ್ರದೇಶದಲ್ಲಿ ಮುಳ್ಳುಪೊದೆ; ಅವರ ದರ್ಪ ಪೌರುಷಗಳು ಪ್ರತಿಧ್ವನಿತವಾಗುತ್ತಿದ್ದ ಅರಮನೆಗಳಲ್ಲಿ ನರಿಗೂಗೆಗಳ ಕರ್ಕಶ ಧ್ವನಿ. ಪಾಳು ದೇವತೆಯ ಕುಹಕದ ಅಟ್ಟಹಾಸ. ಅತ್ಯುತ್ತಮ ಸೌಂದರ್ಯ ಕಾಂತಿಯಿಂದ ಬೆಳಗುತ್ತಿದ್ದ ಮಂಟಪ, ಗುಣ, ಪ್ರಾಸಾದ, ಅರಮನೆ ಇವುಗಳಿದ್ದ ಕಡೆ ಪದಚ್ಯುತವಾದ ದೇವತಾ ವಿಗ್ರಹಗಳು, ಒಡೆದುಬಿದ್ದಿರುವ ಇನ್ನೂ ಬೀಳುತ್ತಲೇ ಇರುವ ಕಟ್ಟಡಗಳು; ತಮಗೆ ಬಂದಿರುವ ದುರ್ಗತಿಯಾದರೂ ಎಂತಹದೆಂಬುದನ್ನೇ ನೋಡಿ ಜನ ಭೀತಿಗೊಳ್ಳಲೆಂದು ರಾಶಿ ರಾಶಿಯಾಗಿ ಭೂಶಿಷ್ಟವಾದ ಬರಿಯ ಕಲ್ಲುಗುಪ್ಪೆ ಗಳಂತಿರುವ — ಕಂಬ, ವೇದಿಕೆ, ಸೂರುಗಲ್ಲು. ವಿಜಯನಗರ ಧ್ವಂಸವಾದುದಂತೂ ಹಾಗಿರಲಿ, ಆ ರಾಜರ ಇಂದ್ರಸದೃಶವಾದ ವೈಭವಗಳೂ ಉಚ್ಛ್ರಾಯ ಅಭಿಲಾಷೆಗಳೂ ಮಹಾಸನ್ನಾಹಗಳೂ ಕಾರ್ಯಮುಖೇನ ಅಮರತ್ವ ಪಡೆಯಬೇಕೆಂದು ಅವರು ಮಾಡಿದ ಅದ್ಭುತ ಪ್ರಯತ್ನಗಳೂ ಒಟ್ಟಿಗೆ ಇಲ್ಲಿ ನಾಶಪಡೆದು ಅವರ ವೈಭವ ರಂಗವನ್ನು ಈಗ ಮಹಾಶ್ಮಶಾನವನ್ನಾಗಿ ಮಾಡಿವೆ.

## 14.2.1 ಕಠಿಣ ಶಬ್ದಾರ್ಥ

ಅತಿವೃಷ್ಟಿ — ಹೆಚ್ಚು ಮಳೆಯಾಗುವುದು
ಅವತಿದೂರ — ಸನಿಹ, ಸಮೀಪ
ಅನಾಮಧೇಯ — ಹೆಸರಿಲ್ಲದ

ಅನಾವೃಷ್ಟಿ — ಮಳೆಯೇ ಆಗದೆ ಇರುವುದು
ಆಸ್ತಿಭಾರ — ತಳಪಾಯ, ಬುನಾದಿ
ಇವೆಲ್ಲವೂನೋ — ಇವೆಲ್ಲವೂವೋ, (ಪ್ರಾದೇಶಿಕ ಹಾಗೂ ಆಡುಭಾಷೆಯಲ್ಲಿ ಬರುವ ಪ್ರಯೊ
ಉತ್ಕ್ರಾಯ — ಏಳ್ಗೆಯ
ಉದ್ದಂಡ — ಉನ್ನತ, ದರ್ಪ
ಉಪರಂಗ — ಸಣ್ಣ ರಂಗಸ್ಥಲ
ಉಗಟು — ಒರಗು
ಎಳಸು — ಇಚ್ಛಿಸು, ಬಯಸು
ಕಿಸುಗಣ್ಣು — ಕೆಂಪುಕಣ್ಣು
ಜಲಾಂಗಣ — ನೀರಿನ ಸ್ಥಾನ
ಜಾಗ — ಸ್ಥಳ
ತುಲಾ ಪುರುಷ ದಾನ ಸ್ತಂಭ — ತುಲಾಭಾರದ ಕಂಬಗಳು
ತೆಂಕಣ — ದಕ್ಷಿಣ
ದಂಭ (ತತ್ಸಮ) — ದಂಬ (ತದ್ಭವ) ಡಂಬ — ತೋರಿಕೆ, ಗರ್ವ
ದ್ವಾರ — ಬಾಗಿಲು
ಧ್ವಂಸ — ಹಾಳು
ನಮ್ರ — ವಿನಯ, ಬಾಗು
ಪರ್ವ — ಹಬ್ಬ.
ಪಾತ್ರ ನದಿಯಲ್ಲಿ ನೀರು ಹರಿಯುವ ಪ್ರದೇಶ
ಪ್ರಣಾಮ ನಮಸ್ಕಾರ
ಪ್ರದಕ್ಷಿಣೆ ಸುತ್ತು, ತಿರುಗುವುದು
ಪ್ರಾಂಗಣ — ಪ್ರಾಕಾರ
ಪ್ರಾಕಾರ — ಸುತ್ತುಗೋಡೆ, ಪೌಳಿ
ಪ್ರಾಸಾದ — ಉನ್ನತವಾದ ಕಟ್ಟಡ
ಬಂದು ಬಂದು — ಹೆಚ್ಚಾಗಿ ಬಂದು (ಇಲ್ಲಿ ದ್ವಿರುಕ್ತಿಯಿಂದ ಹೆಚ್ಚಾಗಿ ಎಂಬ ಅರ್ಥ ಹೊರಡುವುದು).
ಭೂಶ್ಲಿಷ್ಟ — ಮಣ್ಣಲ್ಲಿ ಮುಚ್ಚಿದ
ಮಧ್ಯವೃತ್ತಿ — ನಡುವಿನ
ಮಧ್ಯರಂಗ ದೇವಾಲಯದ ನಡುವಿನ ರಂಗಸ್ಥಲ
ಮೂತಿ — ಮೋರೆ, ಮುಖ
ಮೊನಚಾದ — ಚೂಪಾದ, ಹರಿತವಾದ
ಮೋಹನತೆ — ಮನಸ್ಸನ್ನು ಸೆಳೆಯುವ ಶಕ್ತಿ
ಯಶೋಹೀನ — ಕೀರ್ತಿಯನ್ನು ಕಳೆದುಕೊಳ್ಳು
ರಾಮದೂತ — ಹನುಮಂತ, ಆಂಜನೇಯ
ಲೋವೆ — ಸಮವಾದ ಮಾಳಿಗೆಗೆ ಹೊಂದಿ ಮಾಡಿರುವ ಇಳುಜಾರಾದ ಸಣ್ಣ ಮಾಳಿಗೆ
ವೃಷ್ಟಿ — ಮಳೆ
ವೈಧವ್ಯ — ವಿಧವೆತನ, ಗಂಡ ಸತ್ತಿರುವ ಸ್ಥಿತಿ
ಶಾಸ್ತ್ರವಿಧಿ — ಶಾಸ್ತ್ರದ ನಿಯಮ, ಕರ್ಮ
ಶೀಘ್ರ — ಬೇಗ
ಸಂವಿಧಾನ — ಒಳ್ಳೆಯ ವಿನ್ಯಾಸ
ಸನ್ನಾಹ — ಸಿದ್ಧತೆ
ಸಮ್ಮುಖ — ಎದುರು, ಸನ್ನಿಧಿ,
ಸಾವಕಾಶ — ನಿಧಾನ
ಸೀರ್ಪನಿ —ತುಂತುರ ಹನಿ
ಸ್ತಿಮಿತಗತಿ — ನಿಯಂತ್ರಣಗೊಳಿಸಿದ. ಹಿಡಿತದಲ್ಲಿಟ್ಟುಕೊಂಡ ವೇಗ
ಹೃದಯಾಪಹಾರಕ — ಹೃದಯವನ್ನು ಅಪಹರಿಸುವ, ಮನಸ್ಸನ್ನು ಸೆಳೆಯುವ

## 14.2.2 ಕವಿಕೃತಿಪರಿಚಯ

'ಪಂಪಾಯಾತ್ರೆ' ಎಂಬ ಈ ಭಾಗವನ್ನು "ಪಂಪಾಯಾತ್ರೆ" ಎಂಬ ಗ್ರಂಥದಿಂದ ಆಯ್ದುಕೊಂಡಿದೆ. ವಿ.ಸೀತಾ ರಾಮಯ್ಯನವರ ಪಂಪಾಯಾತ್ರೆ ಎಂಬ ಗ್ರಂಥ ನಮ್ಮ ಪ್ರವಾಸ ಸಾಹಿತ್ಯದಲ್ಲಿ ಉನ್ನತ ಸ್ಥಾನವನ್ನು ಪಡೆದಿದೆ.

ವೀ.ಸೀತಾರಾಮಯ್ಯನವರು ಹೊಸಗನ್ನಡ ಸಾಹಿತ್ಯದ ಅಗ್ರಮಾನ್ಯ ಲೇಖಕರಲ್ಲಿ ಒಬ್ಬರು. ಅವರ ಭಾವಗೀತೆಗಳು ಭಾವಬುದ್ಧಿಗಳೆರಡನ್ನೂ ಅರಳಿಸುವ ಶಕ್ತಿಯನ್ನು ಪಡೆದಿವೆ. ಮನೆ ತುಂಬಿಸುವುದು ಎಂಬ ಗೀತೆ ಒಂದು ಕಾಲಕ್ಕೆ ಕನ್ನಡಿಗರ ಮನವನ್ನು ತುಂಬಿದ್ದಿತು. ಸೊಹ್ರಾಬ್ ಮತ್ತು ರುಸ್ತುಮ್ ರಂಗಭೂಮಿಯ ಮೇಲೆ ಅತ್ಯಂತ ಯಶಸ್ವಿಯಾದ ಕನ್ನಡ ನಾಟಕ. ಹೀಗೆ ವೀ.ಸೀ.ಅವರು ಕಾವ್ಯ, ನಾಟಕ, ವಿಮರ್ಶೆ, ವಿಚಾರ, ಪ್ರವಾಸ — ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಗೈದು ಹೆಸರಾದವರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರೆಂದು ಕಾರ್ಯಗೈದು ನಿವೃತ್ತರಾಗಿ ಹೊನ್ನಾವರ ಕಾಲೇಜಿನಲ್ಲಿ ಪ್ರಿನ್ಸಿಪಾಲರೆಂದು ಕೆಲಕಾಲ ಕೆಲಸ ಮಾಡಿದರು. ಅವರು ತತ್ವನಿಷ್ಠರು; ಸರಳ ಸಾತ್ವಿಕ ವ್ಯಕ್ತಿಗಳೂ ಆಗಿದ್ದರು.

**ವಿಶೇಷ ವಿವರಣೆ**

ದ್ರಾವಿಡ ಶೈಲಿ — ವಾಸ್ತು ಶಿಲ್ಪದಲ್ಲಿ ದ್ರಾವಿಡ ಶೈಲಿಯೆಂಬುದೊಂದು ಇದೆ. ಚಾಲುಕ್ಯ ಶಿಲ್ಪ, ಹೊಯ್ಸಳ ಶಿಲ್ಪ, ದ್ರಾವಿಡ ಶಿಲ್ಪ— ಹೀಗೆ ಬೇರೆ ಬೇರೆ ಪದ್ಧತಿಗಳಿವೆ. ದ್ರಾವಿಡ ಶೈಲಿಯ ದೇವಸ್ಥಾನಗಳಲ್ಲಿ ಮಹಾದ್ವಾರದ ಮೇಲೆ ಅನೇಕ ಅಂತಸ್ತಿನ ಗೋಪುರಗಳಿರುತ್ತವೆ.

## ಅಭ್ಯಾಸ - 1

ಕೆಳಗಿನ ಪ್ರಶ್ನೆಗಳಿಗೆ ಸಂಕ್ಷೇಪದಲ್ಲಿ ಉತ್ತರ ಬರೆಯಿರಿ.

1. ಕೋದಂಡರಾಮಸ್ವಾಮಿ ದೇವಾಲಯದ ಎದುರು ತುಂಗಭದ್ರೆ ಹೇಗೆ ಹರಿಯುತ್ತಾಳೆ?

   ........................................................................................................

   ........................................................................................................

   ........................................................................................................

2. ಕೋದಂಡರಾಮ ದೇವಾಲಯದಿಂದ ಮುಂದೆ ಹರಿಯುವ ತುಂಗಭದ್ರೆಯನ್ನು ಕಂಡರೆ ನಮ್ಮಲ್ಲಿ ಯಾವ ಬಗೆಯ ಭಾವತರಂಗಗಳು ಹುಟ್ಟುತ್ತವೆ? ಏಕೆ?

   ........................................................................................................

   ........................................................................................................

   ........................................................................................................

3. ವಿಜಯನಗರದಲ್ಲಿ ತುಲಾಭಾರ ಸ್ತಂಭಗಳನ್ನು ಏಕೆ ನಿಲ್ಲಿಸಿರುವರು?

   ........................................................................................................

   ........................................................................................................

   ........................................................................................................

4. ಉಷ್ಣದೇಶದವರಿಗೆ ಸೃಷ್ಟಿಕರ್ತನು ಕೊಟ್ಟ ಶಾಪದಂತೆ ತೋರುವ ಸ್ವಭಾವ ಯಾವುದು?

   ........................................................................................................

   ........................................................................................................

   ........................................................................................................

5. ಮಿಕ್ಕವರು ದೇವಾಲಯ ನೋಡುವಾಗ ಚೆನ್ನಯ್ಯನೇನು ಮಾಡಿದನು?

   ........................................................................................................

   ........................................................................................................

   ........................................................................................................

6. ಚೆನ್ನಯ್ಯನ ಆಸ್ತಿಯೆಂದರೆ ಯಾವುದು?

   ........................................................................................................

   ........................................................................................................

   ........................................................................................................

7. ವಿಜಯ ವಿಠ್ಠಲ ದೇವಾಲಯದ ಪ್ರಾಕಾರದಲ್ಲಿ ನೋಡತಕ್ಕವು ಯಾವುವು?

..................................................................................................

..................................................................................................

..................................................................................................

8. ಮಹಾಮಂಟಪವು ಏಕೆ ಪ್ರೇಕ್ಷಣೀಯವಾಗಿದೆ?

..................................................................................................

..................................................................................................

..................................................................................................

9. ದೇವ ಸಾನ್ನಿಧ್ಯವಿಲ್ಲದ ವಿಠ್ಠಲ ಸ್ವಾಮಿಯ ದೇವಾಲಯದ ಸೌಂದರ್ಯರಾಶಿ ಲೇಖಕರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟು ಮಾಡಿತು?

..................................................................................................

..................................................................................................

..................................................................................................

10. ವಿಜಯ ವಿಠ್ಠಲಸ್ವಾಮಿ ಹಂಪೆಯ ಈ ಗುಡಿಗೆ ಬಾರದೆ ಪಂಡರಪುರದ ಹಳೆಯ ಬಡಮಂದಿರದಲ್ಲಿ ನಿಂತುದಕ್ಕೆ ಲೇಖಕರ ಭಾವ ಲಹರಿ ಯಾವ ಕಾರಣಗಳನ್ನು ಊಹಿಸಿದೆ?

..................................................................................................

..................................................................................................

..................................................................................................

11. ಕಲ್ಯಾಣ ಮಂಟಪವನ್ನು ಲೇಖಕರು ಏಕೆ ಮೆಚ್ಚಿಕೊಂಡಿರುವರು?

..................................................................................................

..................................................................................................

..................................................................................................

12. ಹಾಳು ಹಂಪೆಯನ್ನು ಕಂಡು ಅಂದು ಇಂದಿನ ಚಿತ್ರಗಳು ಲೇಖಕರ ಮನಃಪಟಲದ ಮೇಲೆ ಹೇಗೆ ಮೂಡಿವೆ?

..................................................................................................

..................................................................................................

..................................................................................................

## ಅಭ್ಯಾಸ - 2

ಬಿಟ್ಟ ಪದಗಳನ್ನು ತುಂಬಿರಿ.

1. ಎದುರು ಸಿಕ್ಕ ಕಲ್ಲುಪಿಂಡೆಗಳಿಗೆ ಅಪ್ಪಳಿಸಿ ಸಗರ್ವದಿಂದ ಹರಿಯುತ್ತಿದ್ದ ತುಂಭದ್ರೆಯನ್ನು ಕಂಡು ಯಾರ ಮನಸ್ಸಿನಲ್ಲಿ ತಾನೆ ............................ ಭಾವ ತರಂಗಗಳು ಉದಯಿಸವು?
2. ನಮ್ಮದು ........................ ಖಂಡ.
3. ಇಲ್ಲಿ ಯಾವ ವಿಷಯದಲ್ಲಿಯೂ ಜನರಲ್ಲಿ ..................... ಯಾಗಲಿ, ........................... ಗತಿಯಾಗಲಿ ......................... ಯಾಗಲಿ ಇರದು.
4. ಈ ಸ್ವಭಾವ ಉಷ್ಣದೇಶದವರಾದ ನಮಗೆ ಸೃಷ್ಟಿಕರ್ತ ಕೊಟ್ಟ ಅಖಂಡ ........................ ವೆಂದು ತೋರುತ್ತದೆ.
5. ಚನ್ನಯ್ಯನಿಗೆ ಎಲ್ಲಿದ್ದರೆ ಅದೇ ................. ಅವನ ....................... ಆ ದೊಣ್ಣೆ.
6. ಸೌಂದರ್ಯಕ್ಕೆ ಇತರ .................. ಸಿದ್ಧಿ ಬರಬೇಕಾದ .........................?
7. ಅವರ ಉಚ್ಛ್ರಾಯದ ಉಪ್ಪರಿಗೆಗೆ ನಾನೇಕೆ .......................... ಕಟ್ಟಿಕೊಡಬೇಕು.
8. ಅದು ಸಾಧ್ವಿಯು ..................... ಸೌಂದರ್ಯದಂತೆ ................ ಗೊಂಡಿಲ್ಲ.
9. ಎಲ್ಲಿ ತಣ್ಣಗೆ ತಂಗಾಳಿ ಬೀಸುತ್ತಿತ್ತೋ ಅಲ್ಲಿ ಈಗ ದಾರುಣ ..........................
10. ಅವರ ವೈಭವರಂಗವನ್ನು ಈಗ ಮಹಾ .................... ಮಾಡಿವೆ.

## 14.3 ಸಾರಾಂಶ

ಈ ಅಂಶದಿಂದ ಹಂಪೆಯ ಗತಕಾಲದ ವೈಭವವನ್ನು ನೋಡಿದಿರಿ. ಹಾಳು ಹಂಪೆಯನ್ನು ನೋಡುವುದರಲ್ಲಿ ಏನಿದೆ ಎಂದು ಎಲ್ಲ ಜನರು ಮೂಗು ಮುರಿಯಬಹುದು. ಆದರೆ ಅದರ ಬಗ್ಗೆ ರಸವತ್ತಾದ ವರ್ಣನೆಯಿಂದ ವೀ.ಸೀ. ಅವರು ಹಂಪೆಯನ್ನು ಎಂದೂ ಮರೆಯದ ಸ್ಥಳವನ್ನಾಗಿ ಮಾಡಿದ್ದಾರೆ. ಅದರೊಡನೆಯೇ ಸರಳ ಸುಂದರ ಶೈಲಿಯಲ್ಲಿ ಪ್ರವಾಸದ ವರ್ಣನೆಯನ್ನು ಹೇಗೆ ಮಾಡಬಹುದು — ಮಾಡಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಯಾವುದೇ ಒಂದು ಮಹತ್ವದ ವಸ್ತುವನ್ನು ನೋಡಿದಾಗ ಮನುಷ್ಯನ ಮನಸ್ಸಿನಲ್ಲಿ ಅನೇಕ ಭಾವನೆಗಳು ಏಳುತ್ತವೆ. ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಂಡಿಸುವುದು — ಅರ್ಥಬದ್ಧವಾಗಿ ಜೋಡಿಸುವುದು ಒಂದು ಕಲೆ. ಈ ಕಲೆ ಬಹಳ ಜನಕ್ಕೆ ಸಾಧಿಸಿಲ್ಲ. ಆದರೆ ಕೆಲವರಿಗೆ ಸಾಧಿಸಿದೆ. ಅವರಲ್ಲಿ ವೀ.ಸೀ. ಅವರು ಗಗ್ರಣ್ಯರು. ಇತ್ತೀಚಿನ ತಲೆಮಾರಿನಲ್ಲಿ, ಬಿ ಜಿ ಎಲ್ ಸ್ವಾಮಿ ಅವರ ಹೆಸರನ್ನೂ, ಕೃಷ್ಣಾನಂದ ಕಾಮತ ಅವರ ಹೆಸರನ್ನೂ ಹೇಳಬಹುದು. ಅಡ್ಡಾಟವೇ ಈಗ ಹೆಚ್ಚು ಸುಲಭ ಹಾಗೂ ಎಲ್ಲರಿಗೂ ಸಾಧ್ಯವಾಗುವ ರೀತಿಯಲ್ಲಿ ಇದೆ. ಪ್ರವಾಸ ಸಾಹಿತ್ಯ ಹಿಂದೆ ಬಿದ್ದಿದೆ. ಅಷ್ಟಾಗಿ ಬೆಳೆದು ಬರುತ್ತಿಲ್ಲ. ಆದರೆ ಒಂದು ಕಾಲಕ್ಕೆ ಸಾಹಿತಿಯಾಗ ಬಯಸುವವನು ಪ್ರವಾಸ ಸಾಹಿತ್ಯದಿಂದಲೇ ತನ್ನ ಬರವಣಿಗೆಯನ್ನೂ ಆರಂಭಿಸುವ ಕಾಲವೂ ಒಂದಿತ್ತು. ಅಂಥವುಗಳಲ್ಲಿ ಜ್ವಾಜ್ವಲ್ಯ ಮಾನವಾಗಿ ಬೆಳಗಿದ ಲೇಖಕರು ಸ್ವಲ್ಪ. ಅವರಲ್ಲಿ ವೀ.ಸೀ. ಅವರು ದೊಡ್ಡ ಹೆಸರು ಮಾಡಿದ್ದಾರೆ. ಈ ಅಂಶದಿಂದ ನೀರಸ ವಿಷಯವನ್ನು ಹೇಗೆ ರಸಭರಿತವಾಗಿ ನಿವೇದಿಸಬಹುದು ಎಂದು ಮನಗಾಣುವಿರಿ.

## ಅಭ್ಯಾಸಗಳಿಗೆ ಉತ್ತರಗಳು

ಅಭ್ಯಾಸ-1

1. ಕೋದಂಡರಾಮ ದೇವಾಲಯದ ಎದುರು ತುಂಗಭದ್ರೆ ನಮ್ರಳಾಗಿ ಆ ಸ್ವಾಮಿಗೆ ನಮಸ್ಕಾರ ಮಾಡಲು ಇಚ್ಛಿಸಿ ಪ್ರದಕ್ಷಿಣೆ ಮಾಡಿ ಮುಂದೆ ಹೋಗುವಂತಿದೆ.
2. ಕೋದಂಡರಾಮ ದೇವಾಲಯದಿಂದ ಮುಂದೆ ತುಂಗಭದ್ರಾ ನದಿ ಒಳ್ಳೆ ಸಂಭ್ರಮದಿಂದ ಹರಿಯುತ್ತಿದೆ. ಎದುರು ಬಂದ ಕಲ್ಲುಬಂಡೆಗಳ ಮೇಲೆ ಅಪ್ಪಳಿಸಿ ತುಂತುರಗಳನ್ನು ಚೆಲ್ಲಿಕೊಂಡು ಗಂಭೀರವಾಗಿ ಸಾಗುತ್ತದೆ. ಈ ದೃಶ್ಯವನ್ನು ಕಂಡರೆ ಗಂಭೀರ ಭಾವ ತರಂಗಗಳು ನಮ್ಮಲ್ಲಿ ಹುಟ್ಟುತ್ತವೆ.
3. ವಿಜಯನಗರದ ಅರಸರು ಪರ್ವ ಗ್ರಹಣ ಇತ್ಯಾದಿ ಪುಣ್ಯಕಾಲಗಳಲ್ಲಿ ತುಲಾಭಾರ ಮಾಡಿಸಿಕೊಂಡು ರತ್ನಕನಕಾದಿ ದ್ರವ್ಯಗಳನ್ನು ಯಥೇಷ್ಟವಾಗಿ ದಾನ ಮಾಡುತ್ತಿದ್ದರಂತೆ. ಸಾಮ್ರಾಜ್ಯೇಶ್ವರ ಕೃಷ್ಣದೇವರಾಯ ಹಾಗೂ ಅವನ ತರುವಾಯ ಬಂದ ಅಚ್ಯುತರಾಯ ತುಲಾಭಾರ ಮಾಡಿಸಿಕೊಂಡು ಆ ಸ್ಥಳದಲ್ಲಿ ದಾನ ಧರ್ಮ ಮಾಡಿದರಂತೆ.
4. ಉಷ್ಣದೇಶದ ಜನರಲ್ಲಿ ಸಮತೆಯಾಗಲಿ, ಸ್ತಿಮಿತಗತಿಯಾಗಲಿ ಇಲ್ಲ. ಅತಿವೃಷ್ಟಿ ಅನಾವೃಷ್ಟಿ ಈ ಭಾಗದಲ್ಲಿ ಇದ್ದಂತೆ ಜನರ ಸ್ವಭಾವದಲ್ಲಿಯೂ ಅತಿ ಎಂಬುದೇ ಕಂಡುಬರುತ್ತದೆ. ಇದು ಉಷ್ಣದೇಶದ ಜನರಿಗೆ ಸೃಷ್ಟಿಕರ್ತ ಕೊಟ್ಟ ಶಾಪದಂತಿದೆಯೆಂದು ಲೇಖಕರು ವ್ಯಕ್ತಪಡಿಸಿರುವರು.
5. ಮಿಕ್ಕವರು ದೇವಾಲಯ ನೋಡಲು ಹೋದೊಡನೆ ಚೆನ್ನಯ್ಯ ಹುಳಿ ಮಾವಿನಕಾಯಿಗಳನ್ನು ತಿನ್ನುತ್ತ ದೇವಾಲಯದ ಕಟ್ಟೆಯ ಮೇಲೆ ಕುಳಿತನು. ತನ್ನ ಹೆಗಲ ಮೇಲಿದ್ದ ಜಮಖಾನವನ್ನು ಹಾಸಿ ಮಲಗಿದನು. ಅವನು ತಿಂದುಬಿಟ್ಟ ಕಾಯಿ ತಿನ್ನಲು ಮಂಗಗಳ ಗುಂಪು ಬಂದು ಅವನ ಸುತ್ತಲೂ ನಿಂತಿದ್ದವು. ಅವು ಗೊರ್ರೆನ್ನುವುವು ; ಚೀರುವುವು, ಹಲ್ಲು ಮಸೆಯುವುವು. ಚೆನ್ನಯ್ಯ ಅವುಗಳಿಗೆ ಆಗಾಗ ಮಾವಿನಕಾಯಿ ಬೀಸುತ್ತಿದ್ದನು. ಹತ್ತಿರ ಅವು ಏರಿ ಬಂದರೆ ಅವುಗಳನ್ನು ಬೆದರಿಸುತ್ತ ಕೈಯಿಂದಲೂ ಕೋಲಿನಿಂದಲೂ ಹಿಂದೆ ಸರಿಸುತ್ತ ಅವುಗಳೊಡನೆ ಆಟವಾಡ ತೊಡಗಿದನು.
6. ಚೆನ್ನಯ್ಯ ಎಲ್ಲಿರುವನೋ ಅದೇ ಅವನ ಮನೆ. ಕೈಯೊಳಗಿನ ಕೋಲು ಅವನ ಆಯುಧ. ಹರಕು ಜಮಖಾನ ಅವನ ಸರ್ವಾಸ್ತಿ. ಅವನ್ನು ಬಿಟ್ಟರೆ ಪ್ರಪಂಚದಲ್ಲಿ ತನ್ನವೆನ್ನುವ ಬೇರೆ ವಸ್ತುವೇ ಇಲ್ಲ ಚೆನ್ನಯ್ಯನಿಗೆ.
7. ವಿಜಯ ವಿಠ್ಠಲನ ದೇವಾಲಯದಲ್ಲಿ ಮುಖದ ಮಂಟಪ, ಪಕ್ಕದ ದೇವರ ಕಲ್ಯಾಣ ಮಂಟಪ, ಎದುರಾಗಿರುವ ಕಲ್ಲಿನ ರಥ- ಇವು ಮೂರು ಪ್ರೇಕ್ಷಣೀಯವಾಗಿವೆ.
8. ಶಿಲ್ಪಕಲಾ ಕೌಶಲ ಹಾಗೂ ಕಲೆಯ ಬೆಡಗು ಇವುಗಳಿಂದ ಮಹಾಮಂಟಪ ಅಪ್ರತಿಮವಾಗಿದೆ. ಈ ಮಹಾ ಮಂಟಪಕ್ಕೆ ಹೋಗಲು ಮೆಟ್ಟಲುಗಳನ್ನು ಏರುವಲ್ಲಿ ನಿರ್ಮಿಸಿರುವ ಮದ್ದಾನೆಗಳು ದೃಶ್ಯಕ್ಕೆ ಸೌಂದರ್ಯ ಗಾಂಭೀರ್ಯಗಳನ್ನು ತರುತ್ತಿವೆ. ಅವು ಸರ್ವಾಲಂಕಾರ ಭೂಷಿತವಾಗಿ ಮುಂಗಾಲುಗಳನ್ನು ಎತ್ತಿ ನಿಂತು ಪ್ರೇಕ್ಷಕರನ್ನು ಸ್ವಾಗತಿಸುತ್ತಿವೆ. ಮಂಟಪದ ಮೇಲೆ ಸಾಲು ಸಾಲಾಗಿ ನಿಂತಿರುವ ಕಂಬಗಳಲ್ಲಿ ಮಾಡಿದ ಕೆತ್ತನೆಯ ಕೆಲಸ ಅದ್ವಿತೀಯ ; ಅಪ್ರತಿಮ. ಕಂಬದಲ್ಲಿ ಶರಭ ಸಾಳ್ವಗಳ ಮೇಲೆ ಕುಳಿತು ಪಹರೆಯವರು ಜೀವಂತ ವ್ಯಕ್ತಿಗಳಂತಿರುವರು. ಮೇಲ್ಗಡೆ ಪಟ್ಟಿಕೆಗಳಲ್ಲಿ ಚಿತ್ರಕಲೆಯ ಬೆಡಗು — ರಾಮಾಯಣ ಮಹಾಭಾರತಗಳ ಘಟನೆಗಳು ಮನೋಜ್ಞವಾಗಿ ಚಿತ್ರಿತವಾಗಿವೆ.
9. ಲೋಕೋತ್ತರವಾದ ಕಲಾ ಸೌಂದರ್ಯವನ್ನು ಕಂಡು ಅಲ್ಲಿ ದೇವರಿಲ್ಲದುದನ್ನು ನೋಡಿ ಲೇಖಕರ ಮನಸ್ಸಿನಲ್ಲಿ ಪರಸ್ಪರ ವಿರುದ್ಧ ಭಾವನೆಗಳು ಮೂಡುತ್ತವೆ. ದೇವತಾ ಸಾನ್ನಿಧ್ಯವಿಲ್ಲದ್ದರಿಂದ ಈ ಸೌಂದರ್ಯಕ್ಕೆ ಸಾಫಲ್ಯವಿಲ್ಲವೇನೋ ಎಂಬ ಭಾವನೆ ಮೊದಲು ಮೂಡಿತು. ಮರುಕ್ಷಣದಲ್ಲಿಯೇ ಸೌಂದರ್ಯವೇ ಸಾಕ್ಷಾತ್ ದೇವನಾದುದರಿಂದ ಬೇರೆ ದೇವಸಾನ್ನಿಧ್ಯವದಕ್ಕೆ ಬೇಕಿಲ್ಲ ಎಂಬ ಭಾವವೂ ಮೂಡುತ್ತದೆ.

10. ತಮ್ಮ ಶಕ್ತಿ ಸಾಮರ್ಥ್ಯ ಕೌಶಲಗಳ ಬಗೆಗೆ ಅಹಂಕಾರ ಪಟ್ಟು ಹೆಮ್ಮೆ ದರ್ಪದಿಂದಿರುವ ದೊರೆಗಳ ಹತ್ತಿರ ನಾನೇಕೆ ಹೋಗಬೇಕೆಂದು ವಿಠ್ಠಲನು ಅಲ್ಲಿಯೇ ಉಳಿದನೇನೋ! ವಿಜಯನಗರದ ದೊರೆಗಳು ಮರೆತು ಬಿಟ್ಟಿರುವರು. ಈ ಮರೆತವರು ಇನ್ನೂ ಹೆಚ್ಚು ಮರೆಯಲು ನಾನೇಕೆ ಅವಕಾಶ ಮಾಡಿಕೊಡಲಿ ಎಂದು ದೇವ ಅಲ್ಲಿಯೇ ಉಳಿದಿರಬಹುದೆಂದು ಮರುಕ್ಷಣದಲ್ಲಿ ಊಹಿಸುವರು. ವಿಜಯನಗರ ಸಾಮ್ರಾಜ್ಯ ಪತನಕ್ಕೆ ಅರ್ಧ ಶತಮಾನ ಪೂರ್ವ ಆ ದೊರೆಗಳ ಕರ್ಮವನ್ನು ಕಂಡು ಇವರು ತಾವಾಗಿಯೇ ತಮ್ಮ ಸಾಮ್ರಾಜ್ಯವನ್ನು ನಾಶಪಡಿಸಿಕೊಳ್ಳುತ್ತಿರುವವರು. ನಾನೇಕೆ ಅಲ್ಲಿಗೆ ಹೋಗಬೇಕೆಂದು ವಿಠ್ಠಲಸ್ವಾಮಿ ಪಂಡರಪುರದಲ್ಲಿ ಉಳಿದಿರಬಹುದೆಂದು ಭಾವಿಸುತ್ತಾರೆ.

11. ಕಲ್ಯಾಣ ಮಂಟಪವು ದೇವಸ್ಥಾನದ ಮಹಾಮಂಟಪಕ್ಕಿಂತಲೂ ಮಿಗಿಲಾದುದೆಂಬ ಭಾವನೆ ಲೇಖಕರಿಗೆ ಅದರ ಎದುರು ಬಂದೊಡನೆಯೇ ಭಾಸವಾಯಿತು. ಅಲ್ಲಿ ವಿಶಾಲವಾದ ಮಧ್ಯರಂಗ ; ಅಕ್ಕಪಕ್ಕಗಳಲ್ಲಿ ನಾಲ್ಕು ಕಡೆ ಉಪರಂಗಗಳು. ಸಿಂಹ, ಶರಭ ಜಾತಿಯ ಮೃಗಗಳು, ಮೇಲೆ ಸವಾರರು. ಅಲ್ಲಿಯೂ ಅನೇಕ ಕಂಬಗಳು. ಅವುಗಳ ನಾಲ್ಕು ಕಡೆಗೆ ವಿಧವಿಧವಾದ ನಯ ಕೆಲಸ. ಶಿಲ್ಪಾಭರಣ, ಚಮತ್ಕೃತಿಗಳ ಸೌಂದರ್ಯ ಲೋವೆ ಕಲ್ಲುಗಳ ಮೇಲೆ ಪಕ್ಷಿಯ ರೆಕ್ಕೆಗಳಂತಹ ಶಿಲ್ಪ ಕೆಲಸ, ಕಲ್ಲಿನ ಉಂಗುರಗಳು, ಆ ಶಿಲ್ಪಗಳ ಕಲಾ ಕೌಶಲ್ಯ ಚಿತ್ರಕಲಾವಿದರ ಜಾಣ್ಮೆ ಇವುಗಳನ್ನು ಕಂಡು ಲೇಖಕರು ಮಂತ್ರಮುಗ್ಧರಾಗಿ ಆ ದೊರೆಗಳ ಕಲಾಭಿರುಚಿ, ಅಲಂಕಾರ ದೃಷ್ಟಿ ರಸಿಕತೆ ಇವುಗಳನ್ನು ಮನಸಾರೆ ಮೆಚ್ಚಿಕೊಂಡರು. ಯಾವ ಚಕ್ರವರ್ತಿಯ ಕಲ್ಯಾಣ ಮಂಟಪವೂ ಇದಕ್ಕೆ ಎಣೆಯಾಗದು ಎಂದುಕೊಂಡರು.

12. ಹಾಳು ದೇವತೆ ತನ್ನ ಕರಾಳ ಶಾಸನವನ್ನು ಬೀರಿ ವೈಭವದಿಂದ ಮೆರೆಯುತ್ತಿದ್ದ ವಿಜಯನಗರವನ್ನು ಹಾಳು ಶ್ಮಶಾನವನ್ನಾಗಿ ಮಾಡಿರುವಳು. ರಕ್ತ, ಮಾಂಸ, ರಸ, ರಾಗ, ಬಣ್ಣ ಕಾಂತಿಗಳಿಂದ ಪರುಪುಷ್ಟರಾದ ಯುವಕ ಯುವತಿಯರು ನಗುನಗುತ್ತ ಸರಸವಾಡುತ್ತಿದ್ದ ಈ ಸುಖಭುವಿಯಲ್ಲಿ ಈಗ ವಿಷಪೂರಿತ ಸರ್ಪಗಳು, ಮುಳ್ಳು ಹಂದಿಗಳು, ಕಳ್ಳಕಾಕರು; ಎಲ್ಲಿ ಹೂದೋಟಗಳ ಪರಿಮಳವನ್ನು ಹೊತ್ತುಕೊಂಡು ತಣ್ಣಗೆ ತಂಗಾಳಿ ಬೀಸುತ್ತಿತ್ತೋ ಅಲ್ಲಿ ಈಗ ದಾರುಣ ಉರಿಗಾಳಿ. ಪ್ರಪಂಚದ ಚಕ್ರವರ್ತಿಗಳ ಸಾಲಿನಲ್ಲಿ ಕುಳಿತು ಮೆರೆಯಲರ್ಹರಾದ ದೊರೆಗಳಿದ್ದಲ್ಲಿ ಈಗ ಮುಳ್ಳು ಪೊದೆ. ಅವರ ದರ್ಪ ಪೌರುಷಗಳು ಪ್ರತಿಧ್ವನಿತವಾಗುತ್ತಿದ್ದ ಅರಮನೆಗಳಲ್ಲಿ ಈಗ ನರಿ ಗೂಗೆಗಳ ಕರ್ಕಶ ಧ್ವನಿ; ಹಾಳು ದೇವತೆಯ ಕುಹಕದ ಅಟ್ಟಹಾಸ, ಸುಂದರವಾದ ದೇವಾಲಯಗಳು ಮೆರೆಯುತ್ತಿದ್ದ ಸ್ಥಳದಲ್ಲಿ ಒಡೆದು ಬಿದ್ದಿರುವ ದೇವತಾ ವಿಗ್ರಹಗಳು, ಕಟ್ಟಡಗಳು ವಿಜಯನಗರದ ದೊರೆಗಳ ಎಲ್ಲವೈಭವ ಕಲ್ಪನೆ ಇಲ್ಲಿ ಲಯ ಹೊಂದಿ ಶ್ಮಶಾನವಾದಂತಿದೆ ಎಂಬ ಪರಸ್ಪರ ವಿರೋಧವೆನಿಸಿದ ಚಿತ್ರಗಳು ಲೇಖಕರ ಮನಃಪಟಲದ ಮೇಲೆ ಬಂದು ಹೋಗುತ್ತವೆ.

**ಅಭ್ಯಾಸ - 2**

**ಬಿಟ್ಟ ಪದಗಳು**

1. ಗಂಭೀರ
2. ಅತಿವೃಷ್ಟಿ ಅನಾವೃಷ್ಟಿಗಳ
3. ಸಮತೆ
   ಸ್ತಿಮಿತ
   ಮಧ್ಯವೃತ್ತಿ
4. ಶಾಪ
5. ಮನೆ
   ಆಯುಧ
6. ಕಾರಣಗಳಿಂದ
   ಅವಶ್ಯಕತೆಯೇನಿದೆ?
7. ಸೋಪಾನ
8. ಸಾತ್ವಿಕ
   ಕಳೆ
9. ಉರಿಗಾಳಿ
10. ಶ್ಮಶಾನ